




ಸಾಧಿಸಿದೆ. ಮಕ್ಕಳ ಉಡುಗೆಯಿಂದ ಹಿಡಿದು ಯುವಕ–ಯುವತಿಯರ ಟ್ರೌಸರ್, ಶರ್ಟ್, ಪ್ಯಾಂಟ್, ಹಾಫ್ ಪ್ಯಾಂಟ್, ಟಾಪ್, ಜಾಕೆಟ್.. ಎಲ್ಲವೂ ಡೆನಿಮ್ ವೈವಿಧ್ಯಗಳಲ್ಲಿ ಸೇರಿದೆ' ಎನ್ನುತ್ತಾರೆ ಅರವಿಂದ್ ಉಡುಗೆ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಮೀರ್ ಅಖ್ತರ್.

'ಇದರ 'ಫೈರ್ ಪ್ರೊಟೆಕ್ಟಿವ್' ಗುಣದಿಂದಾಗಿ ಈ ಬಟ್ಟೆ ಯಾವ ಕಾಲದಲ್ಲೂ ಬಳಸಲು ಸೂಕ್ತವಾಗಿದೆ. ಫ್ಯಾಬ್ರಿಕ್ ತಯಾರಿಸುವಾಗಲೇ ಸಾಕಷ್ಟು ಅಧ್ಯಯನ, ಸಂಶೋಧನೆ ಕೈಗೊಳ್ಳಲಾಗಿದೆ. ತಜ್ಞರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. ಜತೆಗೆ ಈ ಬಟ್ಟೆಗಳನ್ನು ಬಳಸಿ 10 ವರ್ಷಗಳ ನಂತರ ಇದನ್ನು ಮರುಬಳಕೆ ಮಾಡಲೂ ಯೋಗ್ಯವಾಗಿವೆ' ಎಂದು ಹೇಳುತ್ತಾರೆ ಅಮೀರ್.

'ಸದ್ಯ ಉಡುಪು ಉದ್ಯಮದಲ್ಲಿ ಮುಂಚೂಣಿಯಲ್ಲಿದೆ ಎನ್ನಲಾಗುವ ಅರವಿಂದ್ ಲಿಮಿಟೆಡ್ 'ಡೆನಿಮ್ ಫಾರ್ ಗುಡ್' ಎಂಬ ಬ್ರ್ಯಾಂಡ್‌ನ ಉತ್ಪನ್ನಗಳನ್ನು ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದೆ. ಉತ್ತಮ ತಂತ್ರಜ್ಞಾನ ಬಳಸಿ ಅರವಿಂದ್ ಹಾಗೂ ಇನ್ವಿಸ್ತಾ ಆಕರ್ಷಕ ಉಡುಪುಗಳನ್ನು ಗ್ರಾಹಕರಿಗೆ ನೀಡುವ ಉದ್ದೇಶ ಕಂಪೆನಿಗಿದೆ' ಎಂದು ವಿವರ ನೀಡುತ್ತಾರೆ ಅಮೀರ್.

'ಅರವಿಂದ್‌ನಲ್ಲಿ ನಾವು ನಿರಂತರವಾಗಿ ಪರಿಸರ ಸ್ನೇಹಿ ತಂತ್ರಜ್ಞಾನಗಳನ್ನು ಮತ್ತು ಪ್ರಕ್ರಿಯೆಗಳನ್ನು ಅಳವಡಿಸಿಕೊಳ್ಳುತ್ತಿದ್ದೇವೆ. ಈ ಮೂಲಕ ಹೊಸ ಹೊಸ ವಿನ್ಯಾಸಗಳ ಜೊತೆಯಲ್ಲಿ ಆರಾಮದಾಯಕ ಮತ್ತು ದೀರ್ಘಬಾಳಿಕೆ ಬರುವ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಈ ಉತ್ಪನ್ನಗಳು ಗ್ರಾಹಕರನ್ನು ಸೆಳೆಯುತ್ತಿವೆ. ಪ್ರಾಜೆಕ್ಟ್ ಇಂಡಿಗೋ ಲೈಫ್ ಡೆನಿಮ್ ವಿಭಾಗದ ಒಂದು ಹೊಸ ವಿಸ್ತರಣೆಯಾಗಿದೆ. ಈ ಮೂಲಕ ಇಂಡಿಗೋ ಭಾರತದಲ್ಲಿ ಮಾಸ್ಟರ್ ಎನಿಸಿದೆ' ಎಂದು ತಮ್ಮ ಉತ್ಪನ್ನದ ಬಗ್ಗೆ ಬೆಳಕು ಚೆಲ್ಲುತ್ತಾರೆ ಅವರು.

## ಒಂದೇ ಉತ್ಪನ್ನ; ಹಲವು ನಾಮ

ಡೆನಿಮ್‌ನಲ್ಲಿ ಹಲವು ವೈವಿಧ್ಯಗಳಿವೆ. ಸಾಮಾನ್ಯವಾಗಿ ಎಲ್ಲ ಸ್ಟ್ರೆಚ್ ಡೆನಿಮ್‌ಗಳು ಲಿಕ್ರಾ ಹೆಸರಿನಲ್ಲಿ ಬರುತ್ತಿದ್ದು, ಕೂಲ್‌ಮ್ಯಾಕ್ಸ್ ಕೋರ್, ಕೂಲ್‌ಮ್ಯಾಕ್ಸ್ ಆಲ್ ಸೀಸನ್, ಲಿಕ್ರಾ ಡ್ಯುಯೆಲ್ ಎಫ್‌ಎಕ್ಸ್ ಮತ್ತು ಲಿಕ್ರಾ ಬ್ಯೂಟಿ.. ಹೀಗೆ ಗ್ರಾಹಕರನ್ನು ಸೆಳೆಯುತ್ತಿವೆ. ಈ ಎಲ್ಲಾ ಉತ್ಪನ್ನಗಳು ವಿನೂತನ, ಆರಾಮದಾಯಕ ಮತ್ತು ಬಾಳಿಕೆ ಬರುವ ಉಡುಪುಗಳಾಗಿವೆ.

ಡೆನಿಮ್ ಉಡುಪುಗಳ ಹೊಸ ವೈವಿಧ್ಯಗಳನ್ನು ಪ್ರದರ್ಶಿಸಲು ಇತ್ತೀಚೆಗೆ ಅರವಿಂದ್ ಲಿಮಿಟೆಡ್ ಬೆಂಗಳೂರಿನ ಹೋಟೆಲ್ ಲಲಿತ್ ಅಶೋಕದಲ್ಲಿ ಫ್ಯಾಷನ್ ಶೋ ಒಂದನ್ನು ಏರ್ಪಡಿಸಿತ್ತು. ರೂಪದರ್ಶಿಯರು ಡೆನಿಮ್ ಉಡುಗೆಗಳನ್ನು ಧರಿಸಿ ರ್‍ಯಾಂಪ್ ಮೇಲೆ ಕ್ಯಾಟ್ ವಾಕ್ ನಡೆಸಿದರು.